ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮೂಡಿಗೆರೆ

ಸಿ.ಸಿ.ನಂ:**238/2025**

| | | |
|---|---|---|
| ಪಿರ್ಯಾದುದಾರರು | : | ರಾಜ್ಯದ ಪರವಾಗಿ ಮೂಡಿಗೆರೆ ಪೋಲೀಸರು,<br>ಮೂಡಿಗೆರೆ ತಾಲ್ಲೂಕು.<br><br>ವಿರುದ್ಧ |
| ಆರೋಪಿತರು | : | **1.** ಸುದರ್ಶನ್.ಕೆ.ಕೆ,<br>ವಯಸ್ಸು ಸುಮಾರು 27 ವರ್ಷ,<br>ಬಿನ್ ದಿಃ ಕೃಷ್ಣೇಗೌಡ,<br>ಎಸ್.ಬಿ.ಜಿ ಗ್ರೂಪ್ ನಲ್ಲಿ ಮ್ಯಾನೇಜರ್ ಕೆಲಸ,<br>ಮೂಡಿಗೆರೆ ತಾಲ್ಲೂಕು.<br><br>ವಾಸಃ ಕೊಲ್ಲಿಬೈಲು ಗ್ರಾಮ, ಹೆಸ್ಗಲ್ ಅಂಚೆ,<br>ಮೂಡಿಗೆರೆ ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ.<br><br>**2.** ಆಕಾಶ್.ಡಿ.ಆರ್,<br>ವಯಸ್ಸು ಸುಮಾರು 30 ವರ್ಷ,<br>ಬಿನ್ ರಾಜೇಶಗೌಡ.ಯು.ಎ,<br>ವಾಸಃ ದಿಣ್ಣೆಕೆರೆ, ಉದುಸೆ ಗ್ರಾಮ,<br>ಗೋಣಿಬೀಡು ಹೋಬಳಿ,<br>ಮೂಡಿಗೆರೆ ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ.<br><br>**3.** ಸುನೀಲ್.ಎಸ್,<br>ವಯಸ್ಸು ಸುಮಾರು 35 ವರ್ಷ,<br>ಬಿನ್ ಸಿದ್ದು, ಪುಷ್ಪಕ್ ಬಾರ್ ನಲ್ಲಿ ಕ್ಯಾಷಿಯರ್,<br>ಗೆಂಡೇಹಳ್ಳಿ ರಸ್ತೆ, ಮೂಡಿಗೆರೆ ಪಟ್ಟಣ.<br>ವಾಸಃ ಚಂದ್ರಾಪುರ ಗ್ರಾಮ,<br>ಗೋಣಿಬೀಡು ಹೋಬಳಿ,<br>ಮೂಡಿಗೆರೆ ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ.<br><br>**4.** ನಾಗೇಂದ್ರ, ವಯಸ್ಸು ಸುಮಾರು 36 ವರ್ಷ,<br>ಬಿನ್ ಯಲ್ಲಪ್ಪ, ಚಿಯರ್ಸ್ ಬಾರ್ ಅಂಡ್<br>ರೆಸ್ಟೋರೆಂಟ್ ನಲ್ಲಿ ಕ್ಯಾಷಿಯರ್,<br>ಮೂಡಿಗೆರೆ ಪಟ್ಟಣ, ಮೂಡಿಗೆರೆ.<br>ವಾಸಃ ಕುಂಬಾರಹಳ್ಳಿ ಗ್ರಾಮ,<br>ಚೀಕನಹಳ್ಳಿ ಅಂಚೆ, ಬೇಲೂರು ತಾಲ್ಲೂಕು,<br>ಹಾಸನ ಜಿಲ್ಲೆ. |

ದೋಷಾರೋಪಣೆ

ಶ್ರೀಮತಿ ಸುರಕ್ಷ.ಕೆ.ಕೆ., *C/c* ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಚಾಸಾ19-ಪೃಥ್ವಿನಾರಾಯಣ ರವರ ಮಾಲೀಕತ್ವದಲ್ಲಿರುವ ಮೂಡಿಗೆರೆ ಪಟ್ಟಣದಲ್ಲಿರುವ ಪುಷ್ಪಕ್ ಬಾರ್ ನಲ್ಲಿ 1 ನೇ ಆರೋಪಿಯಾದ ನೀವು ಮ್ಯಾನೇಜರ್ ಆಗಿ, 2 ನೇ ಆರೋಪಿಯಾದ ನೀವು ಅಸಿಸ್ಟೆಂಟ್ ಮ್ಯಾನೇಜರ್ ಆಗಿ, 3 ನೇ ಆರೋಪಿಯಾದ ನೀವು ಕ್ಯಾಷಿಯರ್ ಆಗಿ ಮತ್ತು 4 ನೇ ಆರೋಪಿಯಾದ ನೀವು ಮೂಡಿಗೆರೆ ಪಟ್ಟಣದ ಚಿಯರ್ಸ್ ಬಾರ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಿಕೊಂಡಿದ್ದು, ಹೀಗಿರುವಾಗ, 1 ಮತ್ತು 2 ನೇ ಆರೋಪಿತರಾದ ನೀವುಗಳು 3 ನೇ ಆರೋಪಿಯೊಂದಿಗೆ ಶಾಮೀಲಾಗಿ ಸಮಾನ ಉದ್ದೇಶದಿಂದ 2022 ನೇ ಜುಲೈ ತಿಂಗಳಿನಿಂದ ದಿನಾಂಕ 17.02.2023 ರ ವರೆಗೆ ಚಾಸಾ19 ರವರಿಗೆ ಸೇರಿದ 15,10,025/- ರೂ ಮೌಲ್ಯದ ಡಿ.ಕೆ ಡಬಲ್ ಕಿಕ್ ಫೈನ್ ವಿಸ್ಕಿ ಬ್ರಾಂಡ್ ನ 3,196 ಟೆಟ್ರಾ ಪ್ಯಾಕೆಟ್ ಗಳು, ಬೆಂಗಳೂರು ಮಾರ್ಟ್ ವಿಸ್ಕಿಯ 7,131 ಟೆಟ್ರಾ ಪ್ಯಾಕೆಟ್ ಗಳು ಮತ್ತು ಕ್ಯಾಪ್ಟನ್ ಮಾರ್ಟಿನ್ ಸ್ಪೆಷಲ್ ವಿಸ್ಕಿಯ 33,913 ಟೆಟ್ರಾ ಪ್ಯಾಕೆಟ್ ಗಳನ್ನು ಕಳವು ಮಾಡಿ, ಮೂಾಡಿಗೆರೆ ಪಟ್ಟಣದ ಚಿಯರ್ಸ್ ಬಾರ್ ನಲ್ಲಿ ಕೆಲಸ ಮಾಡಿಕೊಂಡಿರುವ 4 ನೇ ಆರೋಪಿ ನಿಮಗೆ ಹಾಗೂ ಚಾಸಾ11-ರಾಜೇಶ್, ಚಾಸಾ12-ಪುಟ್ಟಸ್ವಾಮಿ ರವರಿಗೆ ಮಾರಾಟ ಮಾಡಿದ್ದು ಮತ್ತು ಚಾಸಾ2-ಕಲ್ಲೇಶ್ ರವರ ಮೂಲಕ ಎಸ್.ಬಿ.ಜಿ ಬಾರ್ ನಲ್ಲಿ ಮತ್ತು ಚಾಸಾ8-ಚಿದಾನಂದ ರವರ ಮೂಲಕ ಜನ್ನಾಪುರದ ಹೊಯ್ಸಳ ವೈನ್ಸ್ ಶಾಪ್ ನಲ್ಲಿ ಮಾರಾಟ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **381** ಸಹಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಮುಂದುವರೆದು, 3 ನೇ ಆರೋಪಿಯಾದ ನೀವು ಪುಷ್ಪಕ್ ಬಾರ್ ನ ಸ್ಟಾಕ್ ರೂಂ ನಲ್ಲಿ ಸದರಿ ಸ್ಟಾಕ್ ಇಲ್ಲದಿದ್ದರೂ ಸಹ ಸ್ಟಾರ್ ರಿಜಿಸ್ಟರ್ ನಲ್ಲಿ ಸ್ಟಾಕ್ ಇದೆ ಎಂಬುದಾಗಿ ಸುಳ್ಳು ಲೆಕ್ಕ ತೋರಿಸಿದ್ದು ಹಾಗೂ 1 ಮತ್ತು 2 ನೇ ಆರೋಪಿತರಾದ ನೀವುಗಳು ಸ್ಟಾರ್ ಅನ್ನು ಚೆಕ್ ಮಾಡಿ ಸ್ಟಾಕ್ ರಿಜಿಸ್ಟರ್ ಮತ್ತು ಬಾಕಿ ಇರುವ ಸ್ಟಾಕ್ ಗೆ ತಾಳೆಯಾಗುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಇದದರೂ ಕೂಡ ನಿಮ್ಮ ಕರ್ತವ್ಯವನ್ನು ನಿರ್ವಹಿಸದೇ 3 ಮತ್ತು 4 ನೇ ಆರೋಪಿತರೊಂದಿಗೆ ಶಾಮೀಲಾಗಿ ಪುಷ್ಪಕ್ ಬಾರ್ ಗೆ ಸೇರಿದ ಮದ್ಯವನ್ನು 3 ನೇ ಆರೋಪಿಯಾದ ನಿಮ್ಮಿಂದ 4 ನೇ ಆರೋಪಿ ನಾಗೇಂದ್ರ ರವರಿಗೆ ಮತ್ತು ಇತರರಿಗೆ ಕಳವು ಮಾರ್ಗದಲ್ಲಿ ಮಾರಾಟ ಮಾಡಿಸಿ ಚಾಸಾ19 ರವರಿಗೆ ನಂಬಿಕೆ ದ್ರೋಹ ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **406** ಸಹಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿತರ ಉತ್ತರಃ

*(ಆರೋಪಿತರಿಗೆ ದಿನಾಂಕ 06.03.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ).*

Sd/-
*C/c* ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 06.03.2026